## ಮಿಷಿಗನ್ ಪಂಪ ಕನ್ನಡ ಕೂಟದ ೧೯೯೫ - ೯೬ ನೇ ಸಾಲಿನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು

**ಅಧ್ಯಕ್ಷರು:** ರವಿಶಂಕರ್ ಕೊಣನೂರ್; ಉಮಾಮಾಲಿನಿ ಕೊಣನೂರ್

**ಉಪಾಧ್ಯಕ್ಷರು:** ಶ್ರೀನಿವಾಸ್ ರಂಗ; ಜ್ಯೋತಿ ರಂಗ

**ಕಾರ್ಯದರ್ಶಿ:** ಶ್ರೀನಿವಾಸ್ ಬಿದರೆ; ಸೌಮ್ಯ ಮೈಸೂರ್

**ಉಪ ಕಾರ್ಯದರ್ಶಿ:** ನಾಗಪ್ಪ ಮಂಜುನಾಥ್; ಶ್ರುತಿ ಮಂಜುನಾಥ್

**ಖಜಾಂಚಿ:** ಎಚ್. ವಿ. ನಾಗರಾಜ ಮೂರ್ತಿ; ಪಂಕಜ ಮೂರ್ತಿ

## ಮಿಷಿಗನ್ ಪಂಪ ಕನ್ನಡ ಕೂಟದ ಬೆಳ್ಳಿ ಹಬ್ಬ

ಅಮೆರಿಕೆಯ ಮೊದಲ ಕನ್ನಡ ಸಂಘವಾಗಿ ೧೯೭೧ರಲ್ಲಿ ಉದಯಿಸಿದ ಮಿಷಿಗನ್ ಪಂಪ ಕನ್ನಡ ಕೂಟದ ಬೆಳ್ಳಿ ಹಬ್ಬವು ಜುಲೈ ೨೦, ೧೯೯೬ರಂದು ಸಂಭ್ರಮದಿಂದ ನಡೆಯಿತು. ವೆಸ್ಟ್ ಬ್ಲೂಮ್ ಫೀಲ್ಡ್ ನಗರದ ಪ್ರೌಢಶಾಲೆಯ ಸಭಾಂಗಣದಲ್ಲಿ ಜರುಗಿದ ಈ ಸಮಾರಂಭದಲ್ಲಿ ರವಿಶಂಕರ್ ಕೊಣನೂರ್ ಸಭಿಕರಿಗೆ ಸ್ವಾಗತ ಬಯಸಿದರು. ಪ್ರಧಾನ ಸಂಪಾದಕ ಶ್ರೀನಿವಾಸ ರಂಗ, ಅವರೊಂದಿಗೆ ಸಂಪಾದಕರಾಗಿ ನಾಗರಾಜ ಮೂರ್ತಿ, ರವಿ ಕೊಣನೂರ್ ಅವರ ಸಾರಥ್ಯದಲ್ಲಿ ಹೊರತಂದ ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆ "ರಜತ"ದ ಲೋಕಾರ್ಪಣೆಯಾಯಿತು. ಕನ್ನಡದ ಆದಿಕವಿ ಪಂಪನ ವರ್ಣ ಚಿತ್ರದ ಮುಖ ಪುಟದೊಂದಿಗೆ ಪ್ರಕಟವಾದ ಈ ಸಂಚಿಕೆಗೆ ಬೆಳ್ಳಿ ಹಬ್ಬದ ಶುಭ ಸಂದೇಶ ಕಳಿಸಿದ ಗಣ್ಯರು: ಅಧ್ಯಕ್ಷ ಬಿಲ್ ಕ್ಲಿಂಟನ್, ಪ್ರಧಾನಿ ಶ್ರೀ ಪಿ. ವಿ. ನರಸಿಂಹ ರಾವ್, ಕರ್ನಾಟಕದಿಂದ ಉಪ ಮುಖ್ಯಮಂತ್ರಿ ಶ್ರೀ ಜೆ. ಎಚ್. ಪಟೇಲ್, ವಿರೋಧ ಪಕ್ಷದ ನಾಯಕ ಶ್ರೀ ಬಿ. ಎಸ್. ಯಡಿಯೂರಪ್ಪ, ಕನ್ನಡ ಸಂಸ್ಕೃತಿ ಇಲಾಖೆ ಸಚಿಯ ಶ್ರೀ ಎಂ. ಪಿ. ಪ್ರಕಾಶ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಸಾ. ಶಿ. ಮರುಳಯ್ಯ, ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಎಚ್. ನರಸಿಂಹಯ್ಯ. ಆ ಸಂದೇಶಗಳೊಂದಿಗೆ ಅನೇಕ ಅನಿವಾಸಿ ಕನ್ನಡಿಗರ ಬರಹ, ಲೇಖನ, ಕವನಗಳಿಂದ ತುಂಬಿ ಈ ಸಂಚಿಕೆ ಆಕರ್ಷಕವಾಗಿ ಮೂಡಿ ಬಂದಿತ್ತು.

ಅಲ್ಲಿ ನೆರೆದಿದ್ದ ೩೦೦ಕ್ಕೂ ಹೆಚ್ಚು ಕನ್ನಡ ರಸಿಕರಿಗೆ ವಿಶೇಷ ಮನರಂಜನೆ ನೀಡಿದ್ದು ಮೊದಲ ಬಾರಿಗೆ ಅಮೆರಿಕಕ್ಕೆ ಭೇಟಿ ನೀಡಿದ ಬೆಂಗಳೂರಿನ 'ಸೌಂಡ್ ಆಫ್ ಮ್ಯೂಸಿಕ್' ವಾದ್ಯವೃಂದ. ಜನಪ್ರಿಯ, ಪ್ರಖ್ಯಾತ ಕಲಾವಿದರಾದ ಮಂಜುಳಾ, ಗುರುರಾಜ್, ಪುತ್ತೂರು ನರಸಿಂಹ ನಾಯಕ್ ಅವರ ಸುಶ್ರಾವ್ಯ ಗಾಯನ, ಉದಯೋನ್ಮುಖ ವೇಣುವಾದಕ ಪ್ರವೀಣ್ ಗೋಡ್ಖಿಂಡಿಯವರೂ ಸೇರಿದಂತೆ ಅನೇಕ ವಾದ್ಯಪಟುಗಳ ಸಹವಾದನ, ಜೊತೆಗೆ ಮಿಮಿಕ್ರಿ ದಯಾನಂದ್ ಅವರ ಕನ್ನಡ ಚಿತ್ರನಟರ ಸಂಭಾಷಣೆಗಳ ಚತುರ ಅನುಕರಣೆಗಳು ಸಭಿಕರ ಮನಸೂರೆಗೊಂಡವು. ಕಲಾವಿದರಿಗೆ ನೆನಪಿನ ಕಾಣಿಕೆಗಳನ್ನು ಶ್ರೀನಿವಾಸ್ ರಂಗ, ಶ್ರೀನಿವಾಸ್ ಬಿದರೆ, ನಾಗಪ್ಪ ಮಂಜುನಾಥ್ ಅವರು ನೀಡಿದರೆ, ನಾಗರಾಜ ಮೂರ್ತಿಯವರು ವಂದನಾರ್ಪಣೆ ಸಲ್ಲಿಸಿದರು. ಅನೇಕ ಸ್ಥಳೀಯ ಪ್ರಾಯೋಜಕರೊಂದಿಗೆ, ಅಮೆರಿಕೆಯ ಇತರ ಕನ್ನಡ ಸಂಘಗಳೂ ಪಂಪದ ಬೆಳ್ಳಿ ಹಬ್ಬದ ಸಂಭ್ರಮದ ಆಚರಣೆಗೆ ಸಹಕಾರ ನೀಡಿದವು.

ಅಮೆರಿಕೆಯ ಪ್ರಥಮ ಕನ್ನಡ ಕೂಟ ಪಂಪದ ಬೆಳ್ಳಿ ಹಬ್ಬ ಅಮೆರಿಕನ್ನಡಿಗರಿಗೆ, ಅದರಲ್ಲೂ ಮಿಷಿಗನ್ನಡಿಗರಿಗೆ, ಒಂದು ಪ್ರಮುಖ, ಹೆಮ್ಮೆಯ ಮೈಲುಗಲ್ಲು.